ಕ್ರ.ಸಂ	ಜಿಲ್ಲೆ	(ಲಕ್ಷ ರೂ.ಗಳಲ್ಲಿ)
21.	ಕೊಪ್ಪಳ	289.98718
22.	ಮಂಡ್ಯ	361.36976
23.	ಮೈಸೂರು	524.32397
24.	ರಾಯಚೂರು	411.15266
26.	ತುಮಕೂರು	211.17
27.	ಉತ್ತರ ಕನ್ನಡ	13.35998

ಆ) ಹುಬ್ಬಳ್ಳಿ ವಲಯದಿಂದ ಬಂದ ಆದಾಯ ರೂ. 2710.79 ಲಕ್ಷಗಳು. ವಿವರಗಳು ಈ ಕೆಳಗಿನಂತಿವೆ.

ಕ್ರ.ಸಂ	ಜಿಲ್ಲೆ	ಮೊಬಲಗು (ಲಕ್ಷ ರೂ.ಗಳಲ್ಲಿ)
1.	ಬಾಗಲಕೋಟೆ	92.7699
2.	ಬೆಳಗಾಂ	1610.5615
3.	ಬಿಜಾಪುರ	422.0000
4.	ಧಾರವಾಡ	1,27.9102
5.	ಗದಗ್	64.5184
6.	ಹಾವೇರಿ	379.6704
7.	ಉತ್ತರ ಕನ್ನಡ	13.3599

ರಾಜ್ಯದ ನಗರಪಾಲಿಕೆಗಳಲ್ಲಿ ಗಣಕೀಕರಣ

1594 (884) ಶ್ರೀ ಹೊನ್ನಳ್ಳಿ ಜಬ್ಬಾರ್‌ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಗರಪಾಲಿಕೆ, ಮಹಾನಗರ ಪಾಲಿಕೆ, ನಗರಾಭಿವೃದ್ಧಿ ಪ್ರಾಧಿಕಾರಗಳು ಗಣಕೀಕರಣಗೊಳಿಸುವ ವಿಚಾರ ಸರ್ಕಾರದ ಗಮನದಲ್ಲಿದೆಯೇ?

ಆ) ಗಣಕೀಕರಣಗೊಳಿಸಿದ್ದಲ್ಲಿ ರಾಜ್ಯದಲ್ಲಿ ಎಷ್ಟು ನಗರಪಾಲಿಕೆ, ಮಹಾನಗರ ಪಾಲಿಕೆ ನಗರಾಭಿವೃದ್ಧಿ ಪ್ರಾಧಿಕಾರಗಳು, ಇಂಟರ್‌ನೆಟ್ ಸೇವಾ ಕಾರ್ಯಕ್ಕೊಳಪಟ್ಟಿವೆ ಪೂರ್ಣ ವಿವರ ನೀಡುವುದು.

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) :

ಅ) ಸರ್ಕಾರದ ಗಮನದಲ್ಲಿದ್ದು ಈಗಾಗಲೇ ಸರ್ಕಾರ ಕಾರ್ಯಪ್ರವೃತ್ತವಾಗಿದೆ.

ಆ) ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಬೆಂಗಳೂರು ಮಹಾನಗರ ಪಾಲಿಕೆಯನ್ನು ಹೊರತುಪಡಿಸಿ ಉಳಿದ, ರಾಜ್ಯದ ಯಾವುದೇ ಮಹಾನಗರ ಪಾಲಿಕೆ ಮತ್ತು ನಗರಾಭಿವೃದ್ಧಿ ಪ್ರಾಧಿಕಾರಗಳು ಇಂಟರ್‌ನೆಟ್ ಸೇವಾ ಸೌಲಭ್ಯ ಹೊಂದಿರುವುದಿಲ್ಲ.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗೆ ಬಿಡುಗಡೆ ಮಾಡಿದ ಅನುದಾನ

1595 (885) ಶ್ರೀ ಹೊನ್ನಳ್ಳಿ ಜಬ್ಬಾರ್‌ಖಾನ್ ಹೈಯತ್‌ಖಾನ್ (ಹುಬ್ಬಳ್ಳಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1999-2000, 2000-01, 2001-02, 2002-03ನೇ ಸಾಲಿನಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗೆ ಬಿಡುಗಡೆ ಮಾಡಿದ ಅನುದಾನವೆಷ್ಟು?

ಆ) 1999-2000, 2000-01, 2001-02, 2002-03ನೇ ಸಾಲಿನಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗೆ ಸಾಲದ ರೂಪವಾಗಿ ನೀಡಿದ ಆರ್ಥಿಕ ಸಹಾಯವೆಷ್ಟು?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) :

ಅ) ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗೆ ಈ ಕೆಳಕಂಡಂತೆ ಹಣ ಬಿಡುಗಡೆ ಮಾಡಲಾಗಿದೆ.

ವರ್ಷ	ಗ್ರಾಂಟ್	ಮೊತ್ತ
1999-2000	ಎಸ್.ಎಫ್.ಸಿ	24,06.38,390
1999-2000	10ನೇ ಹಣಕಾಸು ಆಯೋಗ	76,25,000
2000-2001	ಎಸ್.ಎಫ್.ಸಿ	13,70,18,524
2001-2002	ಎಸ್.ಎಫ್.ಸಿ	26,15,94,000
2002-2003	ಎಸ್.ಎಫ್.ಸಿ	5,97,51,000

(ಜೂನ್ 2002ರವರೆಗೆ)

ಆ) ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗೆ ಈ ಕೆಳಕಂಡಂತೆ ಸಾಲದ ರೂಪವಾಗಿ ಸಹಾಯಧನ ನೀಡಲಾಗಿದೆ.

1999-2000	ರೂ.	-
2000-2001	ರೂ.	-
2001-2002	ರೂ.	3,00,000.000
2002-2003	ರೂ.	-

ಅಬಕಾರಿ ಅಧೀಕ್ಷಕರುಗಳಿಗೆ ಪದೋನ್ನತಿ

1597 (1904) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2002ನೇ ಮೇ ತಿಂಗಳಲ್ಲಿ ಎಷ್ಟು ಮಂದಿ ಅಬಕಾರಿ ಅಧೀಕ್ಷಕರುಗಳಿಗೆ ಉಪ ಆಯುಕ್ತರಾಗಿ ಪದೋನ್ನತಿ ನೀಡಲಾಗಿದೆ.

ಆ) ಹೀಗೆ ಪದೋನ್ನತಿ ನೀಡುವಾಗ ನಿಯಮಗಳನ್ನು ಪಾಲಿಸಲಾಗಿದೆಯೇ, ಇಲ್ಲವಾದಲ್ಲಿ, ಇದಕ್ಕೆ ಕಾರಣಗಳೇನು,

ಇ) ಈ ರೀತಿ ಪದೋನ್ನತಿ ನೀಡ್ರಾವಾಗ ವ್ಯಾಪಕ ಭ್ರಷ್ಟಾಚಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ದಿನಾಂಕ 31-8-98ರಂದು ಸ್ಥಾನ ಪದೋನ್ನತಿ ನೀಡಿದ ಕೆಲವು ಅಬಕಾರಿ ಅಧೀಕ್ಷಕರಿಗೆ ಮತ್ತೆ 1993ರಿಂದ ಪೂರ್ವಾನ್ವಯವಾಗುವಂತೆ ಮಾರ್ಪಡಿಸಿದ ಆದೇಶ ಹೊರಡಿಸಿರುವುದು ನಿಜವೇ, ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು, ಇದರಿಂದಾಗಿ ರಾಜ್ಯದ ಬೊಕ್ಕಸಕ್ಕೆ ಅನಾವಶ್ಯಕ ವೆಚ್ಚವಾಗುವುದಿಲ್ಲವೆ, ಆರ್ಥಿಕ ಮಿತವ್ಯಯ ಆದೇಶ ಇದಕ್ಕೆ ಅನ್ವಯವಾಗುವುದಿಲ್ಲವೇ, ಈ